**ಅಸಲು ದಾವಾ ನಂಃ 67/2021**
**ಪಿ.ಡಬ್ಲ್ಯೂಃ 02**

**ದಿನಾಂಕಃ 30.01.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎಸ್ ಎಂ ಎ., ಪ್ರತಿವಾದಿ ಪರ ವಕೀಲರಿಂದ**

2. ನಾನು ಎಸ್ ಎಸ್ ಎಲ್ ಸಿಯವರೆಗೆ ಮಲ್ಲಯಾಯಕನಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನನಗೆ ಸೇರಿದ 3 ಎಕರೆ ಜಮೀನು ಸರ್ವೇ ನಂ. 1/1 ರಲ್ಲಿ ಇರುತ್ತದೆ. ಸದರಿ ಜಮೀನು ನನಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ.

3. ನಾನು ವಾದಿಯನ್ನು ಕೇವಲ ನೋಡಿದ್ದು ಆದರೆ ಅವರ ತಮ್ಮ ಕೃಷ್ಣಮೂರ್ತಿಯವರ ಪರಿಚಯವಿರುತ್ತದೆ. ಕೃಷ್ಣಮೂರ್ತಿಯವರು ನನಗೆ ಸುಮಾರು 10 ವರ್ಷಗಳಿಂದ ಗೊತ್ತಿರುತ್ತದೆ. ನಾನು ಮುಳಬಾಗಿಲಿನಲ್ಲಿ ಕಾಲೇಜು ಓದಿರುವುದಿಲ್ಲ ಎಂದರೆ ಸರಿ. ಕೃಷ್ಣಮೂರ್ತಿ ರವರು ಕೂಡ ವ್ಯವಸಾಯ ಕೆಲಸ ಮಾಡುತ್ತಾರೆ. ವಾದಿ ಚಂದ್ರಿಕಾ ರವರ ಊರು ಕೊತ್ತಮಂಗಲ. ವಾದಿ ಚಂದ್ರಿಕಾ ನನಗೆ ಪರಿಚಯವಿರುವುದಿಲ್ಲ ಎಂದು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿ ಬರೆಸಿರುವುದಿಲ್ಲ. ವಾದಿ ಚಂದ್ರಿಕಾ ತ್ಯಾಗರಾಜ ಕಾಲೋನಿಯಲ್ಲಿ ಎಷ್ಟು ವರ್ಷಗಳಿಂದ ವಾಸವಾಗಿದ್ದಾರೆಂದು ನನಗೆ ಗೊತ್ತಿಲ್ಲ.

4. ಪ್ರತಿವಾದಿ ಗೋವಿಂದರೆಡ್ಡಿಯನ್ನು ನಾನು ಸುಮಾರು 6 ವರ್ಷಗಳ ಹಿಂದೆ ನೋಡಿರುತ್ತೇನೆ. ಅವರ ಸ್ವಂತ ಊರು ದುಗ್ಗಸಂದ್ರ. ಪ್ರತಿವಾದಿ ಗೋವಿಂದರೆಡ್ಡಿ ನನಗೆ ಪರಿಚಯವಿರುವುದಿಲ್ಲ ಆದರೆ ಮೊದಲ ಬಾರಿಗೆ ತಾಲೂಕು ಕಚೇರಿಯಲ್ಲಿ ನೋಡಿರುತ್ತೇನೆ. ವ್ಯಾಜ್ಯದ ಜಮೀನನ್ನು ನಾನು ನೋಡಿಲ್ಲ ಎಂದರೆ ಸರಿ. ಸದರಿ ಜಮೀನಿನ ಸರ್ವೇ ನಂ.67/2 ರಲ್ಲಿ 36 ಗುಂಟೆ ಎಂದು ಇರುತ್ತದೆ. ಸದರಿ ಜಮೀನಿನ ಚೆಕ್ಕುಬಂದಿ ಹೇಳಲು ಬರುವುದಿಲ್ಲ. ನಾನು ಸದರಿ ಜಮೀನಿನ ಪಹಣಿ ಪತ್ರಿಕೆಯಲ್ಲಿ ಸರ್ವೇ ನಂಬರ್ ನ್ನು ನೋಡಿರುತ್ತೇನೆ. ಸದರಿ ಪಹಣಿ ಪತ್ರಿಕೆಯನ್ನು ಕ್ರಯದ ಕರಾರು ಪತ್ರ ಆಗುವ ಕಾಲಕ್ಕೆ ನೋಡಿರುತ್ತೇನೆ. ಸದರಿ ಜಮೀನು ಗೋವಿಂದರೆಡ್ಡಿಗೆ ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಕ್ರಯದ ಕರಾರು ಪತ್ರ ಆಗುವ ಮೊದಲು ಮಾತುಕತೆ ಆಗಿರುವ ಕುರಿತು ನನಗೆ ಗೊತ್ತಿಲ್ಲ.

**ಅಸಲು ದಾವಾ ನಂಃ 67/2021**
**ಪಿ.ಡಬ್ಲ್ಯೂಃ 02**

5. ಕ್ರಯದ ಕರಾರು ಪತ್ರ ಆಗುವ ದಿನವೂ ಯಾವುದೇ ಮಾತುಕತೆ ಆಗಿರುವ ಕುರಿತು ನನಗೆ ಗೊತ್ತಿಲ್ಲ. ಆ ದಿನ ನಾನು ಮುಳಬಾಗಿಲಿನ ತಾಲೂಕು ಕಚೇರಿಗೆ ಕೃಷ್ಣಮೂರ್ತಿ ಕರೆದ ಮೇರೆಗೆ ಬೆಳಿಗ್ಗೆ 11.00 ಗಂಟೆಗೆ ಬಂದಿರುತ್ತೇನೆ. ನನ್ನೊಂದಿಗೆ ಉಳಿದ ಸಾಕ್ಷಿದಾರರು ಹಾಗೂ ಕ್ರಯಕ್ಕೆ ತೆಗೆದುಕೊಳ್ಳುವವರು ಹಾಗೂ ಕೊಡುವವರು ಇದ್ದರೂ. ಸಾಕ್ಷಿದಾರರನ್ನು ಯಾರು ಕರೆಸಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನಾವು ಆ ದಿನ ತಾಲೂಕು ಕಚೇರಿ ಬಳಿ ಇರುವ ಮರದ ಕೆಳಗೆ ಸೇರಿದ್ದೆವು.

6. ಸ್ಟಾಂಪ್ ಪೇಪರ್ ನ್ನು ಪತ್ರ ಬರಹಗಾರರು ತಂದಿದ್ದರು. ಕ್ರಯದ ಕರಾರು ಪತ್ರವನ್ನು ಸೈಬರ್ ಸೆಂಟರ್ ನಲ್ಲಿ ಟೈಪ್ ಮಾಡಿಸಲಾಗಿರುತ್ತದೆ. ಆದರೆ ಅದನ್ನು ಯಾರು ಟೈಪ್ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಕ್ರಯದ ಕರಾರು ಪತ್ರದಲ್ಲಿ ಏನೆಲ್ಲಾ ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿಯೂ ಮುಂದುವರೆದು ಆ ದಿನ ಹಣ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪತ್ರ ನೊಂದಣಿ ಆದಾಗ ಮಧ್ಯಾಹ್ನ 2.30 ರಿಂದ 3.00 ಗಂಟೆ ಆಗಿತ್ತು. ಆ ದಿನ 500 ರೂ ಮುಖ ಬೆಲೆಯ ಹಣವನ್ನು ಕೊಡಲಾಗಿರುತ್ತದೆ. ಎಷ್ಟು ಕಟ್ಟುಗಳನ್ನು ಕೊಡಲಾಗಿತ್ತು ಎಂದು ಹೇಳಲು ಬರುವುದಿಲ್ಲ ಆದರೆ ಆ ದಿನ 9 ಲಕ್ಷ ಕೊಡಲಾಗಿದ್ದು 10 ಲಕ್ಷಕ್ಕೆ ವ್ಯಾಪಾರ ಮುಗಿದಿರುತ್ತದೆ. ಅಷ್ಟು ಹಣವನ್ನು ವಾದಿ ಚಂದ್ರಮ್ಮ ತಂದಿದ್ದರು. ಅಷ್ಟು ಹಣವನ್ನು ಮರದ ಕೆಳಗೆ ವಾದಿ ಚಂದ್ರಮ್ಮ ಗೋವಿಂದರೆಡ್ಡಿಗೆ ಕೊಟ್ಟಿರುತ್ತಾರೆ. ಹಣವನ್ನು ಕೊಟ್ಟ ನಂತರ ನಾನು ಸಹಿ ಮಾಡಿರುತ್ತೇನೆ. ಮೊದಲು ನಾನು, ಮುನಿಯಪ್ಪ, ಗೋವಿಂದರೆಡ್ಡಿ ನಂತರ ಚಂದ್ರಿಕಾ ಸಹಿ ಮಾಡಿರುತ್ತಾರೆ. ಎಲ್ಲಾ ಸಹಿಗಳನ್ನು ತಾಲೂಕು ಕಚೇರಿಯಲ್ಲಿ ಮಾಡಿರುತ್ತೇವೆ. ಕೃಷ್ಣಮೂರ್ತಿಯ ಸಹಿಯನ್ನು ಕ್ರಯದ ಕರಾರು ಪತ್ರಕ್ಕೆ ತೆಗೆದುಕೊಂಡಿರುವುದಿಲ್ಲ. ಎಲ್ಲರೂ ಒಂದೇ ಇಂಕ್ ಪೆನ್ನಿನಿಂದ ಸಹಿ ಮಾಡಿರುತ್ತೇವೆ.

7. ಗೋವಿಂದರೆಡ್ಡಿ ಹಾಗೂ ಚಂದ್ರಿಕಾ ರವರು ಕ್ರಯದ ಕರಾರು ಪತ್ರಕ್ಕೆ ಎಷ್ಟು ಕಡೆ ಸಹಿ ಮಾಡಿರುತ್ತಾರೆಂದು ಹೇಳಲು ಬರುವುದಿಲ್ಲ. 3 ವರ್ಷಗಳ ಒಳಗಾಗಿ ಕ್ರಯ ಪತ್ರ ಮಾಡಿಸಿಕೊಳ್ಳುವ ಕುರಿತು ಷರತ್ತು ಬರೆಯಲಾಗಿರುತ್ತದೆ. 3 ವರ್ಷಗಳ ಕಾಲವನ್ನು ಯಾವ ಕಾರಣಕ್ಕೆ ನಿಗದಿಪಡಿಸಲಾಗಿದೆ ಎಂದು ಗೊತ್ತಿರುವುದಿಲ್ಲ. ನಾನು ಸಹಿ ಮಾಡಿದ ನಂತರ ನೇರವಾಗಿ ಮನೆಗೆ ಹೋಗಿರುತ್ತೇನೆ. ತದನಂತರ ಏನಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡಿದ ನಂತರ ಕ್ರಯದ ಕರಾರು ಪತ್ರದ ವಿಚಾರವಾಗಿ ನನಗೆ ಯಾರು ಏನೂ

**ಅಸಲು ದಾವಾ ನಂಃ 67/2021**
**ಪಿ.ಡಬ್ಲ್ಯೂ: 02**

ತಿಳಿಸಿರುವುದಿಲ್ಲ ಎಂದು ಹೇಳುತ್ತಾರೆ. ಈ ದಿನ ಸಾಕ್ಷಿ ನುಡಿಯಲು ವಕೀಲರು ಕರೆಸಿರುತ್ತಾರೆ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನೂ ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಗೋವಿಂದರೆಡ್ಡಿಯನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಗೋವಿಂದರೆಡ್ಡಿ ಯವರು ಚಂದ್ರಿಕಾ ಇವರಿಂದ ನಾನು ಹೇಳುವಂತೆ 9 ಲಕ್ಷ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರದಲ್ಲಿ 3 ವರ್ಷಗಳ ಷರತ್ತು ನಿಗದಿ ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ವ್ಯಾಜ್ಯದ ಜಮೀನಿನ ಪಹಣಿ ಪತ್ರಿಕೆಯನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ವಾದಿ ಚಂದ್ರಿಕಾ ರವರು ಸಹ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿ ಚಂದ್ರಿಕಾ ಹಲವಾರು ಕೇಸುಗಳನ್ನು ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ವಾದಿಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.